# ಪುಸ್ತಕ ಪರಿಚಯ

***Scientific Management : Spiritual Way***

**ಲೇಖಕರು : ಸಾಯಿ ಬಿಂದು (ಹೆಚ್.ವಿ.ಶ್ರೀನಿವಾಸ)**

**ಪ್ರಕಾಶಕರು : ಜಯಲಕ್ಷ್ಮಿ ಪಬ್ಲಿಕೇಷನ್ಸ್ "ಮೈತ್ರೇಯೀ"**

**1898, 7ನೇ ಮೇನ್, "ಇ" ಬ್ಲಾಕ್, 2ನೇ ಹಂತ,**

**ರಾಜಾಜಿನಗರ, ಬೆಂಗಳೂರು-560010**

**ಪುಟಗಳು : 276+24 ಬೆಲೆ : 275/-ರೂಗಳು**

ನಿರ್ವಹಣಾ ಪ್ರಪಂಚದ (*Management world*) ಅನೇಕ ಮಜಲುಗಳನ್ನು ಅಧ್ಯಯನ ಮಾಡಿರುವ ಒಂದು ಅಪೂರ್ವ ಪ್ರಯತ್ನ ಇದಾಗಿದೆ. ನಿರ್ವಹಣೆಯ ಮೂಲಭೂತ ಕಲ್ಪನೆಗಳು, ಅದರ ವಿವಿಧ ಅಂಗಗಳು, ಅದರ ಪ್ರಕ್ರಿಯೆ, ನಿರ್ವಹಣಾ ಸಾಧನಗಳು (*Tools of Management*)—ಇವೆಲ್ಲವನ್ನೂ ಸಹ ವಸ್ತುನಿಷ್ಠವಾಗಿ ಅಧ್ಯಾತ್ಮದ ದರ್ಶನದ ಹಿನ್ನೆಲೆಯಲ್ಲಿ ಚರ್ಚಿಸಲ್ಪಟ್ಟಿರುವುದು ಈ ಗ್ರಂಥದ ವೈಶಿಷ್ಟ್ಯ. ನಿರ್ವಹಣೆಯ ಎರಡು ಮುಖ್ಯವಾದ ಆಯಾಮ ಗಳನ್ನು ಗುರುತಿಸಿರುವ ಈ ಗ್ರಂಥದಲ್ಲಿ ಎರಡು ಭಾಗಗಳಿವೆ. ಮೊದಲನೆಯದಾಗಿ ಬಹಿರಂಗದ ನಿರ್ವಹಣೆ, ನಂತರ ಅಂತರಂಗದ ನಿರ್ವಹಣೆ—ಇವುಗಳೆರಡೂ ಒಂದಕ್ಕೊಂದು ಪೂರಕವಾಗಿರುವುದರಿಂದ ನಿರ್ವಹಣೆಯ ಒಂದು ಸಮಗ್ರ ಚಿತ್ರ ನಮಗಿಲ್ಲಿ ದೊರೆಯುತ್ತದೆ.

ಮೊದಲನೆಯ ಭಾಗದಲ್ಲಿ ಯಾವುದೇ ಸಂಸ್ಥೆಗೆ ನಿರ್ವಹಣಾ ಪ್ರಪಂಚದಲ್ಲಿ ಎದುರಾಗುವ ಸಮಸ್ಯೆಗಳೆಲ್ಲವನ್ನೂ ಸುಮಾರು ಮೂವತ್ತು ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ. ಮೌಲ್ಯಾಧಾರಿತ ನಿರ್ವಹಣೆಗೆ ಮಾದರಿಯಾಗಿ, ಸಾಂಘಿಕವಾಗಿ ತನ್ನ ಎಲ್ಲ ಚಟುವಟಿಕೆ ಗಳನ್ನು ದಕ್ಷವಾಗಿ ನಿರ್ವಹಿಸುತ್ತಿರುವ ರಾಮಕೃಷ್ಣ ಮಿಷನ್ನನ್ನು ಲೇಖಕರು ಪ್ರಸ್ತಾಪಿಸುತ್ತಾರೆ.

ಎರಡನೆಯ ಭಾಗದಲ್ಲಿ ಅಂತರಂಗದ ನಿರ್ವಹಣೆಯ ಕುರಿತ ಲೇಖಕರ ಸಮಾಲೋಚನೆ ಬಹಳ ಮನೋಜ್ಞವಾಗಿದೆ. ಈ ಭಾಗ ದಲ್ಲಿರುವ ಸುಮಾರು ೨೦ ಅಧ್ಯಾಯಗಳು ಅಂತರಂಗದ ನಿರ್ವ ಹಣೆಯ ಆಳ ವ್ಯಾಪ್ತಿಗಳತ್ತ ಬೊಟ್ಟು ಮಾಡಿತೋರಿಸುತ್ತವೆ. ಈ ಅಂತರಂಗದ ನಿರ್ವಹಣೆ ನಮ್ಮ ದೈನಂದಿನ ಜೀವನದ ನಿರ್ವಹಣೆಗೆ ನೇರವಾಗಿ ಸಂಬಂಧ ಪಟ್ಟುದ್ದಾಗಿದೆ. ವ್ಯಕ್ತಿಯ ಕಾರ್ಯಕ್ಷಮತೆ ಆತನ ಅಂತರಂಗದ ವಿಕಾಸದಲ್ಲಿದೆ ಎಂಬುದರ ಸಚಿತ್ರ ನಿರೂಪಣೆ ಯಶಸ್ವಿಯಾಗಿ ಮೂಡಿ ಬಂದಿದೆ.

ಬರೀ ವಿಷಯವನ್ನು ಆಕರ್ಷಕವಾದ ಸರಳವಾದ ಭಾಷೆಯಲ್ಲಿ ಚರ್ಚಿಸಿರುವುದಷ್ಟೇ ಅಲ್ಲ. ವಿಷಯದ ಸುಲಭಗ್ರಾಹ್ಯಕ್ಕೆ ಅನುಕೂಲ ವಾಗುವಂತೆ ಬಹಳಷ್ಟು ಚಿತ್ರಗಳಿಂದ ಚಾರ್ಟ್‌ಗಳಿಂದ ವಿಷಯದ ನಿರೂಪಣೆ ಮಾಡಿರುವುದು ಈ ಗ್ರಂಥದ ಮತ್ತೊಂದು ವೈಶಿಷ್ಟ್ಯ.

ನಿರ್ವಹಣಾ ವಿಜ್ಞಾನವನ್ನು ಒಂದು ವಿಶಾಲವಾದ ಹಂದರದಲ್ಲಿ ನಿರೂಪಿಸಿ ಓದುಗನನ್ನು ಹಂತಹಂತವಾಗಿ ವಿಷಯದ ಆಳಕ್ಕೆ ಕರೆ ದೊಯ್ಯುವ ಪ್ರಯತ್ನದಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ. ಕೃತಿಯ ತುಂಬ ಹಬ್ಬಿಕೊಂಡಿರುವ ಲೇಖಕರ ಒಳನೋಟಗಳು ವಿಷಯದ ಬಗ್ಗೆ ಆಸಕ್ತಿಯನ್ನು ಕೆರಳಿಸಿ ಸುಲಭವಾಗಿ ಓದಿಸಿಕೊಂಡು ಹೋಗು ತ್ತವೆ. ಪ್ರತಿಯೊಂದು ಅಧ್ಯಾಯದ ಕೊನೆಯಲ್ಲೂ ಸೂತ್ರರೂಪ ದಲ್ಲಿರುವ ಸೊಗಸಾದ ನುಡಿಗಳು ನೆನಪಿನಲ್ಲಿಡಲು ಯೋಗ್ಯವಾಗಿ ಅತ್ಯಂತ ಸ್ಫೂರ್ತಿದಾಯಕವಾಗಿವೆ.

ತನ್ನ ವಿಶಿಷ್ಟವಾದ ಸೊಬಗಿನಿಂದ ಪುಸ್ತಕದ ಶೀರ್ಷಿಕೆಯೇ ಆಸಕ್ತಿ ಹುಟ್ಟಿಸುವಂಥದ್ದಾಗಿದೆ. ಪುಸ್ತಕದ ಹೊರಮೈಗೆ ಸೂರ್ಯಕಿರಣಗಳಿಂದ ಅರಳಿರುವ ಕಮಲದ ವರ್ಣರಂಜಿತ ಆಕರ್ಷಕ ಭಾವಚಿತ್ರವನ್ನು ಒದಗಿಸಿರುವುದು ಅರ್ಥಪೂರ್ಣವಾಗಿದೆ.

ಮನುಷ್ಯನ ವಿವಿಧ ಅಂಗಗಳ ಪೈಕಿ ಮುಖವು ಅತ್ಯಂತ ಪ್ರಧಾನ ಭಾಗವೆನಿಸುತ್ತದೆ. ಹಾಗೆಯೇ ಒಂದು ಗ್ರಂಥಕ್ಕೆ ಅದರ ಮುನ್ನುಡಿ ಅತ್ಯಂತ ಪ್ರಧಾನವಾದ ಒಂದು ಭಾಗ. ಈ ಕೃತಿಗೆ ವಿದ್ವತ್ ಪೂರ್ಣವಾದ ಮುನ್ನುಡಿಯನ್ನು ಡಾ.ಡಿ.ಎಂ.ನಂಜುಂಡಪ್ಪನವರು ಬರೆದಿರುವುದು ಕೃತಿಯ ಮೌಲ್ಯವನ್ನು ಹೆಚ್ಚಿಸಿದೆ.

ತಮ್ಮ ಲೌಕಿಕ ಜೀವನದಲ್ಲಿ ಚಾರ್ಟರ್ಡ್ ಅಕೌಂಟೆಂಟ್ ಮತ್ತು ಬ್ಯಾಂಕರ್ ಆಗಿರುವ ಶ್ರೀ ಹೆಚ್.ವಿ. ಶ್ರೀನಿವಾಸ ಅವರು ಶಿರಡಿ ಸಾಯಿಬಾಬಾರ ಆಶೀರ್ವಾದವನ್ನು ಪಡೆದು ಸಾಯಿಬಿಂದುಗಳಾಗಿ ಆ ಜ್ಞಾನಸಮುದ್ರದ ಆಳಕ್ಕೆ ನುಗ್ಗಿ ವಿವೇಕದ ಮುತ್ತು ರತ್ನಗಳನ್ನು ಇತ್ತು ಓದುಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಆಧ್ಯಾತ್ಮಿಕ ಬದುಕಿನ ಸಾರ್ಥಕತೆಯನ್ನು ಅನುಭೂತಿಗೆ ತಂದುಕೊಂಡಿರುವ ಅವರು ನಿರ್ವ ಹಣೆ ಎಂಬುದು, ತನ್ನ ಕೊನೆಯ ಹಂತದಲ್ಲಿ, ವ್ಯಕ್ತಿ ತನ್ನನ್ನು ನಿರ್ವಹಿಸುವುದೇ ಆಗಿದೆ—ಅಂದರೆ ಅಂತಿಮವಾಗಿ ಅದು ಆಧ್ಯಾತ್ಮಿಕ ನಿರ್ವಹಣೆ—ಎಂದು ಅರ್ಥೈಸುತ್ತಾರೆ. ನಿರ್ವಹಣಾ ಜಗತ್ತಿನಲ್ಲಿನ ಅವರ ಈ ನಿಲುವು ನಮ್ಮ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ನೆಲೆಗಟ್ಟಿನಲ್ಲಿ ಬೇರುಬಿಟ್ಟಿದ್ದಾಗಿದೆ ಎಂಬುದು ಗಮನಾರ್ಹ. ತಾವು ನಿರ್ವಹಣಾಶಾಸ್ತ್ರದ ಗುರುವಲ್ಲ, ನಿರ್ವಹಣಾ ಜಗತ್ತಿನ, ಕರ್ಮ ಕ್ಷೇತ್ರದ ಜಿಜ್ಞಾಸು ಮಾತ್ರ ಎಂಬುದು ಲೇಖಕರ ವಿದ್ವತ್ತಿಗೆ ಅನುಗುಣ ವಾದ ವಿನಯವನ್ನು ಸೂಚಿಸುತ್ತದೆ.

ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚು ಭಾರದ ಹೊರೆಯಾಗುತ್ತಿರುವ ನಮ್ಮ ಜೀವನವನ್ನು ನಮ್ಮ ವಿಕಾಸಕ್ಕೆ ಪರಿಪೂರ್ಣತೆಗೆ ಬಳಸಲು ಈ ಕೃತಿ ಸಹಾಯಕವಾಗಿದೆ. ನಿರ್ವಹಣೆಯಂತಹ ಅತ್ಯಂತ ಮಹತ್ವದ ವಿಷಯವನ್ನು ಅದರ ಸಮಗ್ರತೆಯಲ್ಲಿ ಸರಳವಾದ ಇಂಗ್ಲಿಷ್‌ನಲ್ಲಿ ಸಮಾಲೋಚಿಸಿರುವ ಈ ಗ್ರಂಥ ಜೀವನದ ವಿವಿಧ ಕ್ಷೇತ್ರದಲ್ಲಿರುವ ವರಿಗೆ ಅತ್ಯಂತ ಉಪಯುಕ್ತವಾಗುವುದರಲ್ಲಿ ಸಂದೇಹವಿಲ್ಲ. ಆದರೆ ಕನ್ನಡದಲ್ಲಿ ಇಂತಹ ಕೃತಿಗಳು ಇಲ್ಲವೇ ಇಲ್ಲವೆನ್ನುವಷ್ಟು ಅಪರೂಪ ವಾಗಿದೆ. ಕನ್ನಡ ಭಾಷೆಯಲ್ಲೂ ಇಂತಹ ಗ್ರಂಥಗಳು ಬೆಳಕು ಕಾಣಲಿ ಎಂಬುದೇ ನಮ್ಮ ಹಾರೈಕೆ. ನಿರ್ವಹಣಾ ಜಗತ್ತಿಗೆ ಇಂತಹ ಅಪೂರ್ವವಾದ ಕೃತಿಯನ್ನು ಕೊಟ್ಟಿರುವ ಲೇಖಕರು ಓದುಗರ ಅಭಿನಂದನೆಗೆ ಪಾತ್ರರಾಗಿದ್ದಾರೆ.

— ವಿಜಯ ಕುಮಾರ